ಸ್ಪಷ್ಟವಾಗಿ ಕಾಣುತ್ತವೆ. ನಟನ ಮುಖ ಹತ್ತಿರದಿಂದ ನೋಡುವಂತಿಲ್ಲ, ಆದರೆ ಅವನ ಧ್ವನಿಯ ದುಗುಡ–ದುಮ್ಮಾನ ಬಿಕ್ಕಳಿಕೆಯಾಗಿ ಬದಲಾಗುವುದು ನಿಮಗೆ ಅರ್ಥವಾಗುತ್ತಿದೆ. ಅವನು ಸಂತೋಷವಾಗಿದ್ದಾನಾ ಎಂದು ನೋಡಲು ನೀವು ಹತ್ತಿರ ಹೋಗಬೇಕಿಲ್ಲ, ಅವನ ಕಣ್ಣುಗಳ ನಕ್ಷತ್ರದ ಹೊಳಪು ನಿಮ್ಮ ಕಣ್ಣುಗಳ ಬೆಳಕಾಗುತ್ತದೆ. ಮೈಮರೆತು ಅವನೊಂದಿಗೆ, ಅವಳೊಂದಿಗೆ ನೀವು ಪ್ರಯಾಣ ಮಾಡುತ್ತಿದ್ದೀರಿ. ಸ್ವಲ್ಪ ಹೊತ್ತಿನಲ್ಲಿ ಸೀನ್ ಬದಲಾಗುತ್ತದೆ. ಸಣ್ಣ ಬೆಳಕಿನಲ್ಲಿ ಗೌಡ–ಗೌಡ್ತಿ/ರಾಜರಾಣಿಯ/ಸನ್ಯಾಸಿ/ಜಿಂಕೆ ಯಾವುದೋ ಪಾರ್ಟು ಮಾಡಿದ ಎಲ್ಲರೂ ಸಮಾನ ಶ್ರಮ ಹಾಕಿ ಸ್ಟೇಜ್ ಮೇಲಿನ ಪ್ರಾಪರ್ಟಿ ಬದಲಾಯಿಸುತ್ತಿದ್ದಾರೆ. ಆ ಸಮಯದಲ್ಲಿ ನೀವೂ ಅವರೊಂದಿಗೆ ನಾಟಕದಿಂದ ತಾತ್ಕಾಲಿಕವಾಗಿ ನಿರ್ಗಮಿಸುತ್ತೀರಿ. ಮತ್ತೆ ಹೊಸ ಸೀನು ಶುರುವಾದ ಕೂಡಲೆ ನೀವೂ ಥಟ್ ಅಂತ ಪ್ರೇಕ್ಷಕರಾಗುತ್ತೀರಿ, ಕಥೆ ಎಲ್ಲಿ ನಿಂತಿತೋ ಅಲ್ಲಿಂದ ನೀವೂ ಮತ್ತೆ ಕಥೆಯ ಬೆನ್ನೇರುತ್ತೀರಿ.

ಇಷ್ಟೆಲ್ಲಾ ಮ್ಯಾಜಿಕ್ ನಡೆಯುವುದು ಕತ್ತಲಲ್ಲಿಯೇ, ಎಲ್ಲೋ ಮೂಲೆಯಿಂದ ಸೂಸುವ ಮಂದಬೆಳಕು ನಿಮ್ಮ ಮನಸ್ಸನ್ನು ಪ್ರಜ್ವಲಿಸುತ್ತದೆ. ಇದಿಷ್ಟಕ್ಕೂ ಒಂದು ಆಯಾಮ ಬೇಕು. ಅದು ರಂಗಭೂಮಿಯ ಕೊಂಡಿಯಾಗಬೇಕು. ನಿಮ್ಮ ಮನಸ್ಸು ಮತ್ತು ಜಗತ್ತಿನ ಅತ್ಯಂತ ಪುರಾತನ ಕಲೆಯಾದ ನಾಟಕಕ್ಕೆ ಒಂದು ಸಂಪರ್ಕ ಏರ್ಪಾಡಾಗಬೇಕು. ಪ್ರತೀ ನಾಟಕ ನೋಡುವುದು ಅಂದರೆ ಒಂದು ಮಿನಿ, ಲಘು ಇತಿಹಾಸ ಬದುಕಿದ ಹಾಗೆ. ಇದೊಂದು ಸಾಂಸ್ಥಿಕ, ಸಾಂಘಿಕ ಚಟುವಟಿಕೆ. ಸಿನಿಮಾದ ಹಾಗೆ ವೈಯಕ್ತಿಕ ಸ್ಪೇಸ್ ಆಗಲೀ, ಬೃಹತ್ ಆರ್ಥಿಕತೆಯಾಗಲೀ ಇಲ್ಲ.

ಇದು ಇತಿಹಾಸದ ಕಾಲದಿಂದಲೂ ಇರುವುದು ಹೀಗೇ! ಒಂದೊಂಮ್ಮೆ ನೀವು ಹಳೆಯ ನಾಗರಿಕತೆಗಳ ದೇಶಗಳಿಗೆ ಹೋದ ಅನುಭವ ಹೊಂದಿದ್ದರೆ ಅಲ್ಲಿನ ಜನ ನಿಮಗೆ ಮ್ಯೂಸಿಯಮ್ಮು, ಅರಮನೆ, ಐತಿಹಾಸಿಕ ಪಳೆಯುಳಿಕೆಗಳು ಇತ್ಯಾದಿಗಳ ಜೊತೆಗೆ ಹೆಮ್ಮೆಯಿಂದ ತೋರಿಸುವುದು ಅಂದರೆ ಅಲ್ಲಿನ ಸಾವಿರಾರು ಜನ ಕೂರಬಲ್ಲಂಥ ನಾಟಕ ಪ್ರದರ್ಶನದ ಜಾಗಗಳು. 'ಆಂಫಿಥಿಯೇಟರ್' ಅಂತ ಕರೆಯುತ್ತಾರೆ ಅವುಗಳನ್ನು. ಅರ್ಧ ವೃತ್ತಾಕಾರದಲ್ಲಿ ಸುತ್ತಲೂ ಜನ ಪ್ರದರ್ಶನವನ್ನು ನೋಡುವ ಹಾಗೆ ಇದ್ದು, ಹೋಗುತ್ತಾ ಎತ್ತರೆತ್ತರಕ್ಕೆ ಸಾಗುತ್ತದೆ ಆ ಆಸನ ವ್ಯವಸ್ಥೆ. ಅದನ್ನ ಎಂಥಾ ಹೆಮ್ಮೆಯಿಂದ ತೋರಿಸುತ್ತಾರೆ ಅಂತೀರಿ! ಸಾವಿರಾರು ಜನ ಕೂತು ನೋಡುವ ನಾಟಕ ಎಂಥದ್ದಿರಬಹುದು! ಅದನ್ನು ನೋಡಿದವರು ಪುಣ್ಯವಂತರೇ ಸರಿ!

ರಂಗಾಯಣದ ಸಂಸ್ಥಾಪಕರಾದ ರಂಗ ದಿಗ್ಗಜ ಬಿ.ವಿ. ಕಾರಂತರು ರಂಗಾಯಣ ಸ್ಥಾಪಿಸಿದ ಮೊದಲ ಕೆಲವು ವರ್ಷಗಳಲಿ ಮೈಸೂರಿನಲ್ಲಿದ್ದ ಸಂಸ್ಥೆಯ ನಾಟಕ ಪ್ರದರ್ಶನಕ್ಕೆಆಗಾಗ ಸರ್ಕಾರದ ಪ್ರತಿನಿಧಿಗಳನ್ನು ಕರೆಸಬೇಕಾದ ಅನಿವಾರ್ಯಕ್ಕೆ ಒಳಗಾಗುತ್ತಿದ್ದರು. ರಂಗ ರುಚಿ ಕಡಿಮೆ ಇರುವ ಜನರನ್ನು ಕರೆದು ಅವರ ಮಾತು ಕೇಳುವುದೆಂದರೆ ಕಸಿವಿಸಿ ಆಗಿರಬೇಕು. ಆದರೇನು ಮಾಡುವುದು? ನಾಟಕ ಎಲ್ಲರನ್ನೂ ಒಳಗೊಳ್ಳುವ ಒಂದು ಕಲೆ.

ಹೀಗೆ ಬಂದ 'ದೊಡ್ಡವರೊಬ್ಬರು' ಭಾಷಣ ಮಾಡುತ್ತಾ ಪ್ರತೀ ಬಡಾವಣೆಯಲ್ಲೂ ರಂಗ ಮಂದಿರಗಳಾಗಬೇಕು ಅಂತ ಹೇಳುವಾಗ ನೆರೆದಿದ್ದ ರಂಗಾಸಕ್ತರ ಚಪ್ಪಾಳೆಯ ಸದ್ದು ಕೇಳಿ ಹೇಳುವ ಆವೇಶದ ಸ್ಕೇಲ್ ಸ್ವಲ್ಪ ಜಾಸ್ತಿಯಾಗಿಬಿಟ್ಟಿತು. "ಮನೆಮನೆಗೂ ಒಂದು ವೇದಿಕೆ ಇರಬೇಕು. ಮನೆಮನೆಯಲ್ಲೂ ನಾಟಕ ಆಗಬೇಕು" ಅಂದುಬಿಟ್ಟರು.

ಆಲೋಚನೆಯೇನೋ ಸುಂದರವಾದದ್ದೇ. ಹಾಗೆ ಒಂದು ಪಕ್ಷ ಸಾಧ್ಯವಾದರೆ ಒಳ್ಳೆಯದೇ. ಆದರೆ, ಈಗಿರುವ ಫಾರ್ಮಿನ ನಾಟಕಗಳನ್ನು ಹಾಗೆ ಕುಗ್ಗಿಸಿ ನಾಟಕ ಅನ್ನುವ ಅಂಶವನ್ನೇ ತೆಗೆದುಹಾಕುವಷ್ಟು ಬಸವಳಿಸಿ ಮಾಡಲು ಬರುವುದಿಲ್ಲವಲ್ಲ?

ಅವರ ಬಳಿಕ ಕಾರಂತರು ಮಾತಾಡುವವರಿದ್ದರು. ಸದರಿ ಮನೆಮನೆ ಭಾಷಣ ಮುಗಿದ